ಆಯವ್ಯಯದಲ್ಲಿ ಮಂಜೂರು ಮಾಡಲಾಗಿದ್ದು, ಈ ಹಣವನ್ನು ಪೂರ್ಣವಾಗಿ ಬಳಸಿಕೊಳ್ಳಲಾಗಿದೆ.

ಆ) ಕೇಂದ್ರ ಸರ್ಕಾರದಿಂದ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ಸಾರ್ವಜನಿಕ ಉದ್ದಿಮೆಗಳ ಇಲಾಖೆಯಲ್ಲಿ ಎರಡು ಯೋಜನೆಗಳಿವೆ.

1) ರಾಜ್ಯ ಸಾರ್ವಜನಿಕ ಉದ್ದಿಮೆಗಳ ಎಲ್ಲಾ ವರ್ಗದ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ ನೀಡುವುದು ಹಾಗೂ ಅತ್ಯುತ್ತಮ ಸಾಧನೆ ತೋರಿ ಮಾನ್ಯ ಮುಖ್ಯಮಂತ್ರಿಯವರ ರತ್ನ ಪ್ರಶಸ್ತಿಯನ್ನು ಪಡೆದ ಸಾರ್ವಜನಿಕ ಉದ್ದಿಮೆಗಳ ವ್ಯವಸ್ಥಾಪಕ ನಿರ್ದೇಶಕರುಗಳನ್ನು ದೇಶೀಯ ಮತ್ತು ವಿದೇಶೀಯ ಅತ್ಯುತ್ತಮ ಸಂಸ್ಥೆಗಳ ಅಧ್ಯಯನಕ್ಕಾಗಿ ಕಳುಹಿಸಿಕೊಡಲಾಗುವುದು.

2) ಸಾರ್ವಜನಿಕ ಉದ್ದಿಮೆಗಳ ಮೌಲ್ಯಮಾಪನ ಮಾಡುವುದು ಮತ್ತು ಉತ್ತಮ ಸಾಧನೆ ತೋರಿದ ಸಂಸ್ಥೆಗಳಿಗೆ ಮಾನ್ಯ ಮುಖ್ಯ ಮಂತ್ರಿಯವರ ವಾರ್ಷಿಕ ರತ್ನ ಪ್ರಶಸ್ತಿಯನ್ನು ನೀಡಲಾಗುವುದು. ಅಲ್ಲದೇ ಸಾರ್ವಜನಿಕ ಉದ್ದಿಮೆಗಳ ಇಲಾಖೆಯಲ್ಲಿರುವ ಜ್ಞಾನಭಂಡಾರವನ್ನು ಉನ್ನತೀಕರಿಸಲಾಗುವುದು.

ಅಗ್ನಿಶಾಮಕ ದಳದ ಕೇಂದ್ರ ಪ್ರಾರಂಭಿಸುವುದು

361 (608) ಶ್ರೀಮಂಜು ಎ. (ಅರಕಲಗೂಡು):–ಗೃಹ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಹಾಸನ ಜಿಲ್ಲೆ ಅರಕಲಗೂಡು ಪಟ್ಟಣದಲ್ಲಿ ಅಗ್ನಿಶಾಮಕ ಕೇಂದ್ರ ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ;

ಆ) ಇದ್ದಲ್ಲಿ ಈ ಕೇಂದ್ರವನ್ನು ಯಾವಾಗ ಪ್ರಾರಂಭಿಸಲಾಗುವುದು

ಡಾ॥ ವಿ.ಎಸ್. ಆಚಾರ್ಯ (ಗೃಹ ಸಚಿವರು):–

ಅ) ಹೌದು

ಆ) ಅರಕಲಗೂಡಿನಲ್ಲಿ ಅಗ್ನಿಶಾಮಕ ಠಾಣೆಯನ್ನು ಪ್ರಾರಂಭಿಸಲು ಈಗಾಗಲೇ ಕೃಷಿ ಇಲಾಖೆಗೆ ರೂ. 1,92,000/–ಗಳ ಮೊತ್ತವನ್ನು ಪಾವತಿಸಿ 2 ಎಕರೆ ಜಮೀನನ್ನು ಖರೀದಿಸಲಾಗಿದೆ.

ಡಾ॥ ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನ ನಿವಾರಣೆ ಯೋಜನೆಯಡಿಯಲ್ಲಿ ಅರಕಲಗೂಡು ತಾಲ್ಲೂಕನ್ನು "ಅತ್ಯಂತ ಹಿಂದುಳಿದ ತಾಲ್ಲೂಕು" ಎಂದು ಘೋಷಣೆ ಮಾಡಿದೆ. 2011–2012ನೇ ಸಾಲಿನ ಪ್ರಾದೇಶಿಕ ಅಸಮತೋಲನೆ

ಪ್ರಸ್ತಾವನೆಯಲ್ಲಿ ಅರಕಲಗೂಡಿನಲ್ಲಿ ಖಾಯಂ ಅಗ್ನಿಶಾಮಕ ಠಾಣಾ ಕಟ್ಟಡ ಹಾಗೂ 14 ವಸತಿಗೃಹಗಳ ನಿರ್ಮಾಣವನ್ನು ಸೇರ್ಪಡೆ ಮಾಡಿಕೊಂಡು ಅನುದಾನ ಒದಗಿಸಿಕೊಂಡು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸಿಬ್ಬಂದಿಗಳ ಕೊರತೆ

362 (232) ಶ್ರೀಮಂಜುನಾಥ್ ಹೆಚ್.ಪಿ. (ಹುಣಸೂರು):–ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಹುಣಸೂರು ಪುರಸಭೆಯಲ್ಲಿ ಪೌರಕಾರ್ಮಿಕರ ಹಾಗೂ ಕುಡಿಯುವ ನೀರಿನ ಸರಬರಜಿಗಾಗಿ ಮೀಸಲಾಗಿರುವಂತಹ (ಅಭಿಯಂತರರು, ವಾಲ್‌ಮ್ಯಾನ್, ಫಿಟ್ಟರ್ ಇತ್ಯಾದಿ) ಹುದ್ದೆಗಳು ಯಾವುವು ಮತ್ತು ಎಷ್ಟು ?

ಆ) ಈ ಹುದ್ದೆಗಳ ಪೈಕಿ ಖಾಲಿ ಇರುವ ಹುದ್ದೆಗಳು ಎಷ್ಟು ಮತ್ತು ಎಂದಿನಿಂದ ಖಾಲಿ ಇರುತ್ತದೆ ?

ಇ) ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಬಾಲಚಂದ್ರ ಜಾರಕಿ ಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು):–

ಅ) ಹುಣಸೂರು ಪುರಸಭೆಯಲ್ಲಿ ಪೌರಕಾರ್ಮಿಕರು ಹಾಗೂ ಕುಡಿಯುವ ನೀರಿನ ಸರಬರಾಜಿಗಾಗಿ ಮೀಸಲಾಗಿರುವಂತಹ ಹುದ್ದೆಗಳ ವಿವರ ಕೆಳಕಂಡಂತಿದೆ.

ಸಂ	ಹುದ್ದೆಯ ಹೆಸರು	ಮಂಜೂರಾಗಿರುವ ಹುದ್ದೆ ಸಂಖ್ಯೆ
1	ಕಿರಿಯ ಅಭಿಯಂತರರು	1
2	ನೀರು ಸರಬರಾಜು ಆಪರೇಟರ್	4
3	ಸಹಾಯಕ ನೀರು ಸರಬರಾಜು ಆಪರೇಟರ್	4
4	ಪ್ಲಂಬರ್	1
5	ಸೀನಿಯರ್ ವಾಲ್ವ್‌ಮೆನ್	2
6	ನೀರು ಸರಬರಾಜು ಹೆಲ್ಪರ್/ವಾಲ್ವ್‌ಮೆನ್	16
7	ಪೌರ ಕಾರ್ಮಿಕರು	43
8	ಲೋಡರ್	8